This question paper consists of 31 questions and 8 printed pages.

Roll No.
ರೋಲ್ ನಂ.

Code No. 60/S/A/K

Set - A

# KANNADA
# ಕನ್ನಡ
# (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ______________________

Signature of Invigilators 1. ______________________
ಉಸ್ತು ವಾರಿದಾರರ ರುಜು
2. ______________________

## ಸಾಮಾನ್ಯ ಸೂಚನೆಗಳು :

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **60/S/A/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



UNNATI EDUCATIONS
9899436384, 9654279279

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : 100

ಸೂಚನೆಗಳು : **(1)** ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರಪುಸ್ತಕದಲ್ಲಿ ಬರೆಯಿರಿ.

**(2)** ಪ್ರಶ್ನೇಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

**(3)** ಪ್ರಶ್ನಸಂಖ್ಯೆ 1 ರಿಂದ 11 ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

---

**1** ಪಂಪ ಮಹಾಕವಿ ..................... ರಾಜನ ಆಶ್ರಯದಲ್ಲಿ ಕವಿಯಾಗಿದ್ದನು. **1**

(A) ಮುಮ್ಮಡಿ ಅರಿಕೇಸರಿ (B) ಇಮ್ಮಡಿ ಅರಿಕೇಸರಿ

(C) ನಾಲ್ವಡಿ ಅರಿಕೇಸರಿ (D) ಪ್ರಥಮ ಅರಿಕೇಸರಿ

**2** ಭದ್ರಕಾಳಿ ದೇವಾಲಯ ಇರುವ ವನ .................... **1**

(A) ರಾವಣವನ (B) ಸೀತಾವನ

(C) ಮಂಡೋದರಿವನ (D) ಅಶೋಕವನ

**3** ಪ್ರೀತಿಯ ವಿಸ್ತಾರ .................... **1**

(A) ಆಗಸ (B) ಕಡಲು

(C) ಸಮುದ್ರ (D) ಬಣ್ಣ

**4** ಹುಯೆನ್-ತ್ಸಾಂಗ್ ಜೀವಿತಕಾಲದಲ್ಲಿ ಚೀಣ ಆಳುತ್ತಿದ್ದ ರಾಜಮನೇತನ .................. **1**

(A) ಚಾಂಗ್ (B) ಚೊಮ್

(C) ಟಾಂಗ್ (D) ಜಾಕಿ

**5** ಡಾ. ಸಿದ್ಧಲಿಂಗಯ್ಯ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ ವಿಶ್ವವಿದ್ಯಾಲಯ - **1**

(A) ಕರ್ನಾಟಕ (B) ಮೈಸೂರು

(C) ಹಂಪಿ (D) ಬೆಂಗಳೂರು

**6** ಬರವಣಿಗೆಯ ಮೂಲಕ ಕಳಿಸಬಹುದಾದ ವಿದ್ಯುನ್ಮಾನ ಸಾಧನ .................. **1**

(A) ಇ_ಮೇಲ್ (B) ಆನ್‌ಲೈನ್

(C) ಫ್ಯಾಕ್ಸ್ (D) ನೆಟ್

**7** ವರದಕ್ಷಿಣೆ ಒಂದು ಸಾಮಾಜಿಕ .................. **1**

(A) ರೋಷ (B) ಪಿಡುಗು

(C) ಗುಡುಗು (D) ನಡುಗು



UNNATI EDUCATIONS
9899436384, 9654279279

8 ಆಚಾರಕರಸಾಗು .................... ಪ್ರಭುವಾಗು. 1

(A) ನೀತಿಗೆ (B) ರೀತಿಗೆ

(C) ಮೋಡಿಗೆ (D) ನಾಡಿಗೆ

9 'ಬ್ರಾಹ್ಮೀ ಮುಹೂರ್ತ' ಎಂದರೆ ................ 1

(A) ಒಳ್ಳೆಯಕಾಲ (B) ಪ್ರಾತಃಕಾಲ

(C) ಸಾಯಂಕಾಲ (D) ಮಧ್ಯರಾತ್ರಿ

10 'ಅಹಿಂಸೆಯೇ ಪರಮಧರ್ಮ' ಜಗತ್ತಿಗೆ ಮೊದಲು ಸಾರಿದವರು ................. 1

(A) ಗಾಂಧೀಜಿ (B) ನೆಹರು

(C) ಜೈನರು (D) ವೈಷ್ಣವರು

11 ಜಲವೇ ಸಕಲ ಕುಲಕೆ .................. 1

(A) ತಂದೆ (B) ಮೂಲ

(C) ಬಂಧು (D) ತಾಯಿ

12 ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ ಃ

ಜಗತ್ತಿನಲ್ಲಿ ಶಕ್ತಿಗೆ ವ್ಯಾಪಕ ಪುರಸ್ಕಾರವಿದೆ ಶಾರೀರಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳು ಒಂದುಗೂಡಿದಾಗ ಶಕ್ತಿಶಾಲಿ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಕೇವಲ ಶಾರೀರಿಕ ಶಕ್ತಿಯೊಂದರಿಂದಲೇ ಪರಿಪೂರ್ಣತೆ ಅಸಾಧ್ಯ. ಸರ್ವತೋಮುಖ ಬೆಳವಣಿಗೆಯಿಂದ ವ್ಯಕ್ತಿತ್ವದ ಅಭಿವೃದ್ಧಿ ಸಾಧಿತವಾಗುತ್ತದೆ. ಪರಂಪರೆ, ಚರಿತ್ರೆ, ಸಂಸ್ಕೃತಿಯ, ಅರಿವಿನೊಂದಿಗೆ ಸಚ್ಚಾರಿತ್ರ್ಯವನ್ನು ಅಳವಡಿಸಿಕೊಂಡಾಗ ಉದ್ದೇಶಿತ ಗುರಿಯನ್ನು ಪ್ರಾಮಾಣಿಕವಾಗಿ ಸಾಧಿಸಬಹುದು. ಮಹಾಭಾರತದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಶಕ್ತಿಶಾಲಿಯಾಗೆಂದು ಬೋಧಿಸಿದ. ಸ್ವಾಮಿ ವಿವೇಕಾನಂದರು ಸಿಂಹವಾಣಿಯಿಂದ ಯುವಜನತೆಯನ್ನು ಎಚ್ಚರಿಸಿದರು. ವೈಚಾರಿಕ, ನೈತಿಕ ಸಾಮರ್ಥ್ಯದಿಂದ ಜಗತ್ತನ್ನೇ ಗೆಲ್ಲಬಹುದೆಂದು ಸಾರಿದರು. ಅಜ್ಞಾನ, ಕೀಳರಿಮೆ, ರಾಗದ್ವೇಷಗಳ ಕೂಪದಿಂದ ಹೊರಬಂದು ಉದ್ದೇಶಿತಕಾರ್ಯದಲ್ಲಿ ನಿಷ್ಠೆ ಹೊಂದಿದಾಗ ಉಜ್ವಲ ಭವಿಷ್ಯ ರೂಪಗೊಳ್ಳುತದೆ. ಅದಕ್ಕೆ ನಮ್ಮೆಲ್ಲರ ಮುಂದಿರುವ ಅಸ್ತ್ರವೇ ಸಶಕ್ತಿ ಮತ್ತು ಆತ್ಮಸ್ಥೈರ್ಯ. ಒಳ್ಳೆಯ ಆಲೋಚನೆ ಹಾಗೂ ಕ್ರಿಯಾಶೀಲತೆಯಿಂದ ಶಕ್ತಿಯನ್ನು ಪಡೆಯಬಹುದು.

ನಮ್ಮ ಕಣ್ಣಿಗೆ ಕಾಣುವ ಜಗತಿನಲ್ಲಿ ಮಾತ್ರವಲ್ಲ ಜಗತ್ತನ್ನು ಕಾಣುವ ನಮ್ಮ ದೇಹೇಂದ್ರೀಯಾ ಎನ್ನುವ ಯಂತ್ರದಲ್ಲೂ ಹೃದಯಬಡಿತ, ಶ್ವಾಸೋಚ್ಛ್ವಾಸ, ರಕ್ತಪರಿಚಲನೆ, ಎಚ್ಚರ ಮತ್ತು ನಿದ್ರೆ ಒಂದು ತೆರನಾದ ಲಯಬದ್ಧತೇಯನ್ನು ಅನುಸರಿಸುತ್ತದೆ. ನಮ್ಮ ಮನಸ್ಸೆಂಬ ಕಂಪ್ಯೂಟರಿನ ರಚನೆಯಲ್ಲಿ ವಿಶ್ವಾಸ ಪ್ರೀತಿಯಿಂದ ಕೂಡಿದ ನಿಷ್ಪಕ್ಷಪಾತ ಪರಿಶೀಲನೆ, ನಿಸ್ವಾರ್ಥದೃಷ್ಟಿ, ಏಕಾಗ್ರತೆ- ಸ್ವಲ್ಪವಾದರೂ ಹಾಸ್ಯದೃಷ್ಟಿ ಸೇರಿಕೊಂಡಿದ್ದರೆ ಅದು ಬಹಳ ಉಪಯೋಗವಾಗುವುದು. ಜಾಡ್ಯಮನೋಭಾವ, ಅನೈಕಾಗ್ರತೆ, ಅವ್ಯವಸ್ಥೆ, ಸಿಡುಕು, ಬಲವಾದ ಪೂರ್ವಗ್ರಹಗಳು ಮನಸ್ಸೆಂಬ ಯಂತ್ರವನ್ನು ಹಾಳುಮಾಡಿಬಿಡುತ್ತವೆ. ಕ್ರಮನಿಯಮ, ವ್ಯವಸ್ಥೆ, ತಾಳ್ಮೇ, ಸಮತೋಲನ, ಸದುದ್ದೇಶ ಇವುಗಳ ಸಹಕಾರದಿಂದ ಯೋಜನೆಗಳನ್ನು ರೂಪಿಸಿಕೊಂಡರೆ ನಮ್ಮನ್ನು ದುರ್ಬಲಗೊಳಿಸುವ, ದುರಂತಕ್ಕೆಳೆಸುವ ನಿಷೇಧಾತ್ಮಕ- ಭಾವನೆಗಳು ಸಮೀಪ ಸುಳಿಯಲಾರವು. "ಶಕ್ತಿಯೆ ಜೀವನ, ದುರ್ಬಲತೆಯೇ ಮರಣ" ಎಂಬ ತತ್ವವನ್ನು ಮರೆಯಬಾರದು.



UNNATI EDUCATIONS
9899436384, 9654279279

ಪ್ರಶ್ನೆಗಳು :

(1) ಶ್ರೀಕೃಷ್ಣ ಅರ್ಜುನನಿಗೆ ನೀಡಿದ ಬೋಧನೆ .................... 1

(A) ಸಾಹಸದಿಂದಿರು (B) ಶಕ್ತಿಶಾಲಿಯಾಗು

(C) ಧೈರ್ಯದಿಂದುರು (D) ಮರುಗದಿರು

(2) 'ಸನ್ಮಾರ್ಗ' ಇದರ ವಿರುದ್ಧಪದ 1

(A) ಸುಮಾರ್ಗ (B) ಹಾಸ್ಯಮಾರ್ಗ

(C) ದುರ್ಮಾರ್ಗ (D) ಒಳ್ಳೆಮಾರ್ಗ

(3) ಜಗತ್ತಿನಲ್ಲಿ, ವ್ಯಾಪಕ ಪುರಸ್ಕಾರ ಯಾವುದಕ್ಕಿದೆ ? 1

(4) ಶಕ್ತಿಶಾಲಿ ವ್ಯಕ್ತಿತ್ವ ಯಾವಾಗ ರೂಪಗೊಳ್ಳುತ್ತದೆ ? 2

(5) ಉದ್ದೇಶಿತ ಗುರಿಯನ್ನು ಪ್ರಾಮಾಣಿಕವಾಗಿ ಯಾವಾಗ ಸಾಧಿಸಬಹುದು ? 2

(6) ನಮ್ಮೆಲರ ಮುಂದಿರುವ ಅಸ್ತ್ರ ಯಾವುದು ? 1

(7) ದೇಹೇಂದ್ರಿಯ ಎನ್ನುವ ಯಂತ್ರ ಯಾವ ಲಯಬದ್ಧತೆಯನ್ನು ಅನುಸರಿಸುತ್ತದೆ ? 2

(8) ಮನಸ್ಸೆಂಬ ಯಂತ್ರವನ್ನು ಹಾಳುಮಾಡುವಂಥವುಗಳು ಯಾವುವು ? 2

(9) ನಾವು ಯಾವ ತತ್ವವನ್ನು ಮರೆಯಬಾರದು ? 1

**13** ಕೊಟ್ಟಿರುವ ಪದ್ಯವನ್ನು ಓದಿರಿ. ಕೆಳಗೆ ಕೊಟ್ಟಿರುವ ಪ್ರಶ್ನಗಳಿಗೆ ಉತ್ತರಿಸಿರಿ :

ಮಕ್ಕಳು ಬಂದೆವು ಮುದದಿಂದ
ಗುರುಹಿರಿಯರು ಹಿಂದಿಂದ
    ಬಗೆಬಗೆ ಸಸಿಗಳ ಕೈಯಲಿಹಿಡಿದು
    ಊರನು ಸುತ್ತಿ ಬಂದೆವು ನಡೆದು
    ವನಮಹೋತ್ಸವ ಆಚರಿಸಿ
    ಸಸಿಗಳ ನೆಡುವುದು ಬಹಳಖುಷಿ
ಗಿಡದಲ್ಲಿ ಅಡಗಿದೆ ತಾಕತ್ತು
ಗಿಡವೇ ನಾಡಿನ ಸಂಪತ್ತು
ಗಿಡಗಳ ಬಳಗವ ಬೆಳೆಸುವೆವು
ನಾಡಿನ ಸೊಬಗನು ಉಳಿಸುವೆವು.

(1) ಗಿಡದಲ್ಲಿ ಏನು ಅಡಗಿದೆ ? 1

(A) ಸಂಪತ್ತು (B) ತಾಕತ್ತು

(C) ಸೌಲತ್ತು (D) ದೌಲತ್ತು

(2) 'ಮಕ್ಕಳು ಬಂದೆವು ಮುದದಿಂದ' 1

- ಮಕ್ಕಳು, ಬಂದೆವು - ಇವುಗಳ ಏಕವಚನ ರೂಪ.



UNNATI EDUCATIONS
9899436384, 9654279279

(3) 'ಗಿಡವೇ ನಾಡಿನ ಸಂಪತ್ತು' 2

- ಇದರ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ಬರೆಯಿರಿ

(4) 'ಸಸಿಗಳನೆಡುವುದು ಬಹಳ ಖುಷಿ' 2

- ನೆರಳನ್ನು ನೀಡುವ ನಾಲ್ಕು ಸಸಿಗಳ (ಮರಗಳ) ಹೆಸರು ಬರೆಯಿರಿ.

**14** ವೈಚಾರಿಕ ಪ್ರಜ್ಞೆಗೆಇರುವ ಒಂದು ಅಡೆ-ತಡೆ ತಿಳಿಸಿರಿ. **1**

**15** 'ಕಾರಮಕ್ಕ' ಎಂದರೇನು ? **1**

**16** ಬಸವಣ್ಣನವರ ಅಕಿತನಾಮ ಯಾವುದು ? **1**

**17** ಕ್ಷಯರೋಗಕ್ಕೆ ಎಷ್ಟು ತಿಂಗಳು ಔಷಧಿ ಸೇವಿಸಬೇಕು ? **1**

**18** (a) ಶಾಲುಸಾಬಿ ಯಾರ ವಂಶಜ ? **1**

(b) ತಿಮ್ಮ, ಕುದುರೆ, ಹನುಮ, ಶಾಲುಸಾಬಿ - ಇಲ್ಲಿ ಗುಂಪಿಗೆ ಸೇರದ ಪದ. **1**

**19** ಕೆಳಗಿನವುಗಳಿಗೆ ಉತ್ತರಿಸಿರಿ :

(a) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ : **2**

(1) ಏಕೈಕ

(2) ಕ್ಷೇತ್ರಾಭಿವೃದ್ಧಿ

(3) ಗೌರೀಶ

ಅಥವಾ

(a) 'ತನಕ' ಪ್ರತ್ಯಯ ಸೇರಿಸಿ 2 ಪದಗಳನ್ನು ರಚಿಸಿರಿ. **2**

(b) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ : **2**

(1) ಚಿತ್ + ಮಮ

(2) ವಾಕ್ + ಈಶ

(3) ದಿಕ್ + ನಾಗ

ಅಥವಾ

(b) ತದ್ಧಿತನಾಮ - ಹಣವಂತ, ಹೀಗೆ 'ವಂತ' ಪ್ರತ್ಯಾಯ ಸೇರುವಂತೆ - ಎರಡು ತದ್ದಿತ ನಾಮಪದ ಗಳನ್ನು ಬರೇಯಿರಿ. **2**



UNNATI EDUCATIONS
9899436384, 9654279279

(c) ಕೆಳಗೆ ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದಬರೆಯಿರಿ : 2

(1) ಮಿತ್ರ

(2) ಮುಕ್ತಾಯ

(3) ನೈಸರ್ಗಿಕ

ಅಥವಾ

(c) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ : 2

(1) ಯೇಸುಕ್ರಿಸ್ತನು ಲೋಕದ ಎಲ್ಲ ಮಾನವರಿಗಾಗಿ ಬಲಿಯಾದನು.

(2) ಲಕ್ಷ್ಮಣನು ಸೀತೆಯನ್ನು ಅರಣ್ಯದ ಮಧ್ಯ ಬಿಟ್ಟುಬಂದನು.

20 ಕೆಳಗೆ ಕೊಟ್ಟಿರುವ ನುಡಿ ಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಬಳಸಿರಿ : 2

(1) ಕರುಳಕುಡಿ

(2) ಕ್ರೋಡಿಕರಿಸಿ

(3) ಒಳಸಂಚು ಹೂಡು

21 'ಪದ್ಮನಾಭ' ಈ ಪದವು ಯಾವ ಸಮಾಸದ ನಿಯಮದಲ್ಲಿ ಬರುತ್ತದೆ ? 1

22 ಎತ್ತುಗಳು - ಮುತ್ತುಗಳು ಎಂದು ಕವಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ. 4

23 ಕ್ಷೌರಿಕನ ಗುಣ - ವಿಶೇಷವನ್ನು ನಿಮ್ಮ ಮತುಗಳಲ್ಲಿ ಬರೆಯಿರಿ. 5

24 ಕೊಕ್ಕರೆ ಕೊಕ್ಕುಗಳಿಂದ ಮೀನುಗಳನ್ನು ಹಿಡಿಯುವುದು ನಿಸರ್ಗದತ್ತಕೊಡುಗೆ ಎಂದು ಕವಿ ಏಕೆ ಅಂದುಕೊಳ್ಳುತ್ತಾರೆ ? ಕಾರಣ ಕೊಡಿ. 5

ಅಥವಾ

ದೇಶ ತನ್ನ ತಾಯಿಯೆಂದು ಕವಿ ಭಾವಿಸಿರುವುದು ಸರಿಯೇ ? ತಿಳಿಸಿರಿ. 5

25 ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಎರಡೂ ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬರೆಯಿರಿ : 2+2=4

(a) ಆಶಾ - ಗೋಪುರ

(b) ಕೀರ್ತಿ - ಪತಾಕೆ

(c) ಧೈರ್ಯ - ಸಾಹಸ



UNNATI EDUCATIONS
9899436384, 9654279279

26 ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ಇಲ್ಲಿ ದಾಖಲಾದ ವಿವಿಧ ಸಂಶೋಧನಾ ಕೇಂದ್ರಗಳ ಸಂಖ್ಯೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳ ಸಹಾಯದಿಂದ ಎಕ ರೇಖಾ ಚಿತ್ರವನ್ನು ರಚಿಸಿರಿ : 5

| ವರ್ಷ : | 1999 | 2000 | 2001 | 2002 | 2003 | 2004 | 2005 | 2006 | 2007 | 2008 |
|---|---|---|---|---|---|---|---|---|---|---|
| ಸಂಶೋಧನ ಕೇಂದ್ರಗಳು : | 9 | 11 | 15 | 30 | 33 | 39 | 45 | 50 | 52 | 55 |

ಅಥವಾ

ನೀವು ಸಂಪೂರ್ಣ ತಂದೆ ಯಲ್ಲಪ್ಪ, ಬಯ್ಯಾಪುರ, ವಾರು - ಬಾಗಲಕೋಟ, ಬಿ.ಎ.ಬಿ.ಎಡ್. ಪದವೀಧರರು ಎಂದು ಭಾವಿಸಿ ಕೆಳಗಿ ಕೊಟ್ಟಿರುವ ಅರ್ಜಿಯನ್ನು ಭರ್ತಿಮಾಡಿರಿ. 5

ಗೆ,

ಪ್ರಾಚಾರ್ಯರು

ಆದರ್ಶವಸತಿ ಶಾಲೆ

ಚಾಮರಾಜನಗರ

ಉದ್ಯೋಗದ ಹೆಸರು - ಹಿಂದಿ ಭಾಷಾ ಶಿಕ್ಷಕರು (ಅರೆಕಾಲಿಕ)

ಪ್ರ.ಸಂ.ದಿ. - ಆರ್.ಪಿ. 8/17-18, ದಿನಾಂಕ 12/12/2017

ಹೆಸರು : ..............................................

ತಂದೆ : ..............................................

ಜನ್ಮಸ್ಥಳ : ..............................................

ಹುಟ್ಟಿದ ದಿನಾಂಕ : ..............................................

ಪೂರ್ಣವಿಳಾಸ : ..............................................

ರಾಷ್ಟ್ರೀಯತೆ : ..............................................

ಮತ / ಜಾತಿ : ..............................................

ವಿದ್ಯಾರ್ಹತೆ : ..............................................

ಅನುಭವ : ..............................................

ಓದಿದ ಶಾಲೆಯಿಂದ ದೃಡಿಕರಣ ಪತ್ರ : ..............................................

ಬ್ಯಾಂಕ್ / ಅಂಚೆಕಚೇರಿಯ ಹೆಸರು : ..............................................

ಖರೀದಿಸಿದ ಡಿ.ಡಿ. / ಪಿ.ಓ.ನಂ. : ..............................................

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೆನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳು ನಿಜ ಎಂದು ಪ್ರಮಾಣಿಕರಿಸುತ್ತೇನೆ.

ಧನ್ಯವಾದಗಳು

ತಮ್ಮ ನಂಬುಗೆಯ

ಹಸ್ತಾಕ್ಷರ

(ಹೆಸರು)



UNNATI EDUCATIONS
9899436384, 9654279279

27 ಅಜ್ಜಂಪುರ ಗ್ರಾಮದ ಗೃಹಸ್ಥರಿಗೆ ಲೇಖಕರು ಬರೆದ ಪತ್ರದ ಸಾರಾಂಶವೇನು ? 5

28 ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : 1×5=5

(1) ಕಾಡಿನಲ್ಲಿ ಸಿಂಹವಿತ್ತು ಒಂದು ಕ್ರೂರ.
(ಕ್ರಮಪಡಿಸಿ ಬರೇಯಿರಿ)

(2) ಭಾರತ ದೇಶ ಜಗತ್ತಿಗೆಲ್ಲಾ ಒಂದು ಮಾದರಿ ದೇಶ :
ದೇಶ - ಇದರ ವಿರುದ್ಧ ಪದ ..................

(3) ಜೊತೆಜೊತೆಯಾಗಿ : ದ್ವಿರುಕ್ತಿಪದ :: ತಂದೆ-ತಾಯಿ ...................

(4) ಸ್ಕೌಟ್ ಮೇಷ್ಟ್ರು ವಿದ್ಯಾರ್ಥಿಗಳನ್ನು ಹೊರಸಂಚಾರಕ್ಕೆ ಕರೆದೊಯ್ದರು ..................
(ಭವಿಷತ್ ಕಾಲಕ್ಕೆ ಪರಿವರ್ತಿಸಿರಿ)

(5) ಅಬ್ಬಾ ನವೋದಯ ವಿದ್ಯಾಲಯದ ವಾರ್ಷಿಕ ದಿನಾಚರಣೆ ಅದ್ಭುತವಾಗಿತ್ತು ..................
(ಇಲ್ಲಿ ಇರಬೇಕಾದ ಲೇಖನ ಚಿಹ್ನೆ)

29 ತಾವು ಶಂಕರ / ಶಸಿಕಲಾ ಊರು ಮಾಂಬಳ್ಳಿ, ಎಂದು ಅರ್ಥ್ಯಸಿ ತಮ್ಮ ಉರಲ್ಲಿ ಆಸ್ಪತ್ರೆ ಬೇಕು ಎಂದು ವಿನಂತಿಸಿಕೊಳ್ಳುತ್ತಾ, ನಿರ್ದೇಶಕರು, ಆರೋಗ್ಯ ಇಲಾಖೆ, ಬೆಂಗಳೂರು ಇವರಿಗೆ ಒಂದು ಪತ್ರ ಬರೆಯಿರಿ. 7

ಅಥವಾ

ಬಳ್ಳಾರಿ ವಸತಿ ಶಾಲೆಯೊಂದರಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕವೀಂದ್ರ / ಕವಿತಾ ಎಂದು ಭಾವಿಸಿ, ವಿದ್ಯುತ್‌ನಗರ ಹುಬ್ಬಳ್ಳಿಯಲ್ಲಿರುವ ನಿಮ್ಮ ಗೆಳೆಯ ಗೆಳತಿಗೆ ನಿಮ್ಮ 16 ನೇ ಹುಟ್ಟುಹಬ್ಬಕ್ಕೆ ಆಹ್ವಾನಿಸುತ್ತಾ ಒಂದು ಪತ್ರ ಬರೆಯಿರಿ.

30 ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು **50** ಶಬ್ದಗಳಿಗೆ ಮೀರದಂತೆ ಬರೆಯಿರಿ : 5

(1) ಅಹಂಕಾರಕ್ಕೆ ಉದಾಸಿನವೇ ಮದ್ದು
(2) ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ
(3) ಮನಸ್ಸಿದ್ದರೆ ಮಾರ್ಗ

31 ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ : 10

(1) ಅರಣ್ಯಸಂಪತ್ತು
(2) ರೈತನೇ ದೇಶದ ಬೆನ್ನೆಲಬು
(3) ಭಾರತದ ಏಕತೆಯಲ್ಲಿ ವಿದ್ಯಾರ್ಥಿಗಳ ಪಾತ್ರ.

---



UNNATI EDUCATIONS
9899436384, 9654279279